


ಡಾ॥ ಎಸ್.ಸೆಲ್ವಕುಮಾರ್, ಭಾ.ಆ.ಸೇ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರು ಮೈಸೂರಿನ ಇನ್ಫೋಸಿಸ್ ಸಂಸ್ಥೆಯಲ್ಲಿ ಆಯೋಜಿಸಲಾದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ ಉದ್ಘಾಟಿಸಿದ ಸಂದರ್ಭದಲ್ಲಿ ಇಲಾಖೆ ಮತ್ತು ಅಂಗ ಸಂಸ್ಥೆಯ ಮುಖ್ಯಸ್ಥರುಗಳು ಹಾಜರಿದ್ದರು.

**Capacity Building Workshop was inaugurated by Dr. S. Selvakumar IAS, Principal Secretary to Govt, Skill Development, Entrepreneurship and Livelihood Department at Infosys campus. Heads of Field Departments were also present on this occasion.**



ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳು ಹಾಗು ಐ.ಟಿ.ಐ. ಪ್ರಾಂಶುಪಾಲರುಗಳಿಗೆ ಇನ್ಫೋಸಿಸ್, ಮೈಸೂರಿನಲ್ಲಿ ಆಯೋಜಿಸಲಾದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಭಾಗವಹಿಸಿದವರ ಚಿತ್ರ.

**Picture of District Skill Development Officers and ITI Principals who participated in Capacity Building Workshop at Infosys campus.**




ಸನ್ಮಾನ್ಯ ಸಚಿವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು.

# ಇಲಾಖೆ ವತಿಯಿಂದ ಇನ್ಫೋಸಿಸ್ ಮೈಸೂರಿನಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಹಾಗು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರಿಗೆ ಆಯೋಜಿಸಲಾದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ

ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಉನ್ನತೀಕರಿಸಿದ 150 ಐ.ಟಿ.ಐ.ಗಳ ಪ್ರಾಂಶುಪಾಲರಿಗೆ ಮೈಸೂರಿನ ಇನ್ಫೋಸಿಸ್ ಲೀಡರ್‌ಶಿಪ್ ಸಂಸ್ಥೆಯಲ್ಲಿ ಜುಲೈ 18 ಹಾಗು 19 ರಂದು ಎರಡು ದಿನಗಳ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ; ಶ್ರೀಮತಿ ಜ್ಯೋತಿ ಕೆ., ಭಾ.ಆ.ಸೇ., ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ; ಶ್ರೀ ಅಶ್ವಿನ್ ಗೌಡ, ಭಾ.ಕಂ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ; ಶ್ರೀ ಹೆಚ್. ರಾಘವೇಂದ್ರ, ಭಾ.ರೈ.ಸಿ.ಸೇ, ವ್ಯವಸ್ಥಾಪಕ ನಿರ್ದೇಶಕರು, ಜಿ.ಟಿ.ಟಿ.ಸಿ.; ಶ್ರೀ ಯೋಗೇಶ್ವರ್, ನಿರ್ದೇಶಕರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ ಮತ್ತು ಇತರೆ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ತಮ್ಮ ಸ್ವಾಗತ ಭಾಷಣದಲ್ಲಿ, ಶ್ರೀ ಅಶ್ವಿನ್ ಗೌಡರವರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಉನ್ನತೀಕರಣ ಹಾಗೂ ಕರ್ನಾಟಕದ ಹಲವು ಪ್ರವರ್ತಕ ಯೋಜನೆಗಳು ಬೇರೆ ರಾಜ್ಯಗಳಿಗೆ ಸ್ಫೂರ್ತಿಯಾಗಿದೆ ಎಂದರು. ಡಾ. ಎಸ್. ಸೆಲ್ವಕುಮಾರ್‌ರವರು ಉನ್ನತೀಕರಿಸಲಾದ ಐ.ಟಿ.ಐ.ಗಳು ಸ್ವಾವಲಂಬಿ ಮಾದರಿಯಲ್ಲಿ ನಡೆಯಬೇಕು ಹಾಗು ಇವುಗಳನ್ನು ದಕ್ಷತೆಯಿಂದ ನಿರ್ವಹಿಸಬೇಕೆಂದು

ಸಭೆಯನ್ನುದ್ದೇಶಿಸಿ ಪ್ರೋತ್ಸಾಹದಾಯಕ ಮಾತುಗಳ ನ್ನಾಡಿದರು. ಅಧಿಕಾರಿಗಳು ವಿಕೇಂದ್ರೀಕೃತ ಯೋಜನೆ ಹಾಗು ಅನುಷ್ಠಾನದಲ್ಲಿ ತೊಡಗಬೇಕು ಹಾಗೂ ಶ್ರೇಣಿ ಅಥವಾ ಸ್ಥಾನಗಳನ್ನು ಮೀರಿ ಸಮನ್ವಯ ಸಾಧಿಸಬಹುದು ಎಂದು ಹೇಳಿದರು.

ಶ್ರೀ ತಿರುಮಲ ಆರೋಹಿ, ಇನ್ಫೋಸಿಸ್‌ನ ಹಿರಿಯ ಉಪಾಧ್ಯಕ್ಷರು (ಶಿಕ್ಷಣ, ತರಬೇತಿ ಹಾಗು ಮೌಲ್ಯಮಾಪನ), ಇವರು ಮಾತನಾಡಿ ಕಲಿಕೆಯು ಪದವಿ ಪಡೆಯುವುದರೊಂದಿಗೆ ನಿಲ್ಲುವುದಿಲ್ಲ. ಇತ್ತೀಚೆಗೆ ಕಂಪನಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಕೌಶಲ್ಯಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿವೆ ಎಂದರು. ಇಂದಿನ ಉದ್ಯೋಗ ಮಾರುಕಟ್ಟೆಯಲ್ಲಿ ಪ್ರಸ್ತುತವಾಗಿರಲು ಕಲಿಕೆ ಯನ್ನು ಮುಂದುವರೆಸಬೇಕೆಂದು ತಿಳಿಸಿದರು.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಿಂದ ಪ್ರೊಫೆಸರ್ ಶ್ರೀ ವಿನಯ್ ದಾಭೋಲ್ಕರ್‌ರವರು 'ಡಿಸೈನ್ ಥಿಂಕಿಂಗ್' ಕಾರ್ಯಾಗಾರವನ್ನು ನಡೆಸಿದರು. ಭಾಗವಹಿಸದವರ ಗುಂಪುಗಳನ್ನು ರಚಿಸಿ, ಕೌಶಲ್ಯ ವ್ಯವಸ್ಥೆಯಲ್ಲಿರುವ ಸವಾಲುಗಳು ಹಾಗು ಅವುಗಳಿಗೆ ಪರಿಹಾರಗಳನ್ನು ಡಿಸೈನ್ ಥಿಂಕಿಂಗ್‌ನ ತತ್ವಗಳ ಮೂಲಕ ಗುರುತಿಸಲು ಉತ್ತೇಜಿಸಿದರು.

ಕಾರ್ಯಕ್ರಮದ ಎರಡನೇ ದಿನದಂದು, ಇನ್ಫೋಸಿಸ್‌ನ ಹಿರಿಯ ಕಾರ್ಯನಿರ್ವಾಹಕರು, ಶಾಲಾ-ಕಾಲೇಜುಗಳಲ್ಲಿ ರೂಪಾಂತರಗೊಳ್ಳುತ್ತಿರುವ ಶಿಕ್ಷಣ ವಿಧಾನಗಳ ಕುರಿತು, ಹಾಗು ಕಂಪನಿಗಳಲ್ಲಿ ಹೆಚ್ಚುತ್ತಿರುವ 'ಸಾಫ್ಟ್ ಸ್ಕಿಲ್' ಪರಿಣತ ಅಭ್ಯರ್ಥಿಗಳಿಗೆ ಇರುವ ಅವಶ್ಯಕತೆಯ ಕುರಿತು ಮಾತನಾಡಿದರು. ವಿದ್ಯಾರ್ಥಿಗಳಿಗೆ ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್‌ನ ಮೂಲಕ ಕೌಶಲ್ಯ ತರಬೇತಿ ನೀಡುವ ಕುರಿತು ಅವರು ವಿವರಿಸಿದರು.

ಡಾ. ಸಿ. ಎನ್. ಅಶ್ವಥ್‌ನಾರಾಯಣ, ಸನ್ಮಾನ್ಯ ಸಚಿವರು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಇವರು ಸಭೆಯನ್ನುದ್ದೇಶಿಸಿ ಮಾತನಾಡಿ, ಎಲ್ಲರು ಕಾರ್ಯಾಗಾರದ ಪೂರ್ಣ ಸದುಪಯೋಗ ಪಡೆದು



**ಡಿಸೈನ್ ಥಿಂಕಿಂಗ್ ಕಾರ್ಯಾಗಾರದಲ್ಲಿ ಭಾಗವಹಿಸಿದ ಅಧಿಕಾರಿಗಳು.**

ಕೊಳ್ಳಬೇಕೆಂದು ಪ್ರೋತ್ಸಾಹದ ನುಡಿಗಳನ್ನಾಡಿದರು.

ದಿನದ ದ್ವಿತೀಯಾರ್ಧದಲ್ಲಿ ಕೆ.ಎಸ್.ಡಿ.ಸಿ.ಯ ಹಿರಿಯ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕರು ಭಾರತದ ಹಾಗು ಕರ್ನಾಟಕದ ಕೌಶಲ್ಯ ವ್ಯವಸ್ಥೆಗಳ ಪರಿಚಯ ನೀಡಿ, ಕೆ.ಎಸ್.ಡಿ.ಸಿ.ಯ ಪ್ರಮುಖ ಕಾರ್ಯಕ್ರಮಗಳು, ಜಿಲ್ಲಾ ಕೌಶಲ್ಯ ಸಮಿತಿಗಳನ್ನು ಸಶಕ್ತಗೊಳಿಸುವ ಅಗತ್ಯತೆ ಮತ್ತು ಸಂಕಲ್ಪ ಯೋಜನೆಯ ಗುರಿಗಳಾದ ಸಾಂಸ್ಥಿಕ ಅಭಿವೃದ್ಧಿ, ಮಾರುಕಟ್ಟೆ ಆಧಾರಿತ ತರಬೇತಿ ಹಾಗು ಅಂತರ್ಗತ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಪಾತ್ರ ಮುಂತಾದ ವಿಷಯಗಳ ಕುರಿತು ವಿವರಿಸಿದರು. ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಪ್ರಮುಖ ಯೋಜನೆ ಮತ್ತು ಉಪಕ್ರಮಗಳಾದ ವರ್ಲ್ಡ್ ಸ್ಕಿಲ್ಸ್‌ಗೆ ಸ್ಪರ್ಧೆಗಳು, ಇಂಡಸ್ಟ್ರಿ ಲಿಂಕೇಜ್ ಸೆಲ್, ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್ ಹಾಗು ಒಂದು ಜಿಲ್ಲೆ ಒಂದು ಕೌಶಲ್ಯದ ಕುರಿತು ಪರಿಚಯ ನೀಡಲಾಯಿತು.

ಶ್ರೀಮತಿ ಜ್ಯೋತಿ ಕೆ., ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇವರ ಪ್ರೋತ್ಸಾಹಕ ನುಡಿಗಳೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸ ಲಾಯಿತು. ಕಾರ್ಯಾಗಾರದ ಕುರಿತು ಭಾಗವಹಿಸಿದವರು ಉತ್ತಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು.


**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆಎಸ್‌ಡಿಸಿ)**

080-29555 085

www.kausalkar.com

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ




**The Hon'ble Minister addressing the gathering.**

# A Successful Capacity Building Workshop for DSDOs and ITI Principals Organized by the SDEL Department at Infosys, Mysore

Skill Development, Entrepreneurship and Livelihood (SDEL) Department, Government of Karnataka, organized two-day capacity building workshop for all the District Skill Development Officers and the Principals of 150 upgraded ITIs at the Infosys Leadership Institute in Mysuru on 18th and 19th July 2022.

The event was graced by the presence of Dr S Selvakumar, Principal Secretary to Government, SDEL Department; Mrs Jyothi K, Commissioner, Commissionerate of Industrial Employment and Training; Mr Ashwin Gowda, IRS, Managing Director, Karnataka Skill Development Corporation; Mr H Raghavendra, IRPS, Managing Director, Government Toolroom and Training Centre; Mr Yogeshwar, Director, Commissionerate of Industrial Employment and Training and other dignitaries.

In his welcome address, Mr Ashwin Gowda, MD, KSDC, spoke of the pioneering initiatives in Karnataka, such as the upgradation of ITIs, that are being replicated in many other states. Dr S Selvakumar addressed the gathering on the effective management of the upgraded ITIs through

a self-sustaining model. He encouraged the officers and the principals to efficiently lead the decentralized planning and implementation of the Department's programmes. He remarked that convergence can be achieved through coordination, irrespective of hierarchy of positions.

Mr Thirumala Arohi, Senior Vice President for Education, Training and Assessment at Infosys, remarked that learning doesn't stop with earning of degrees, and companies are beginning to place greater emphasis on skills in the recruitment process. He added that one must be a lifelong learner to remain relevant in the job market today.

Prof. Vinay Dabholkar from the Indian Institute of Management – Bengaluru, conducted a Design Thinking workshop at which the participants were grouped and encouraged to identify challenges in the skilling ecosystem and come up with suitable solutions for effectively addressing the same through the process of design thinking.

On the second day of the event, senior leaders from Infosys addressed the participants on technologies that are transforming pedagogy in schools and colleges, and the growing need for soft skills in the industry. They demonstrated the use of the Infosys Springboard for imparting skills digitally to students.

Dr C.N.Ashwathnarayana, the Honourable Minister for Higher Education, IT BT, Sci & Tech, and SDEL, Government of Karnataka addressed the gathering virtually and encouraged the attendees to make the most of the workshop.



**Attendees participate in the design thinking workshop**

In the second half of the day, senior officers and executives from KSDC presented an overview of the skilling ecosystem in India and Karnataka and briefed the participants on the key programmes of KSDC, the need to empower the District Skill Committees and the role of District Skill Development Officers in achieving the goals of SANKALP in institutional building, market relevant training and inclusion. The participants were also briefed on KSDC's initiatives for World Skills, Industry Linkage Cell, Karnataka Skill Connect portal and One District One Skill (ODOS).

The event concluded with the encouraging words of Mrs Jyothi K, Commissioner, and the positive feedback from the participants regarding the workshop.

**Karnataka Skill Development Corporation (KSDC)**

080-29555 085

www.kausalkar.com

scan QR code for more info